**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ,ರವರ ನ್ಯಾಯಾಲಯ,**

**ಕಡೂರು.**

**ಕ್ರಿಮಿನಲ್ ಮೊಕದ್ದಮೆ ಸಂಖ್ಯೆ.2247/2023**

**ಪಿರ್ಯಾದುದಾರರು :** ಸರ್ಕಾರದ ಪರವಾಗಿ : ಸಿಂಗಟಗೆರೆ ಪೊಲೀಸರು

**-ವಿರುದ್ದ-**

**ಆರೋಪಿ/ತರು :** ಶ್ರೀಮತಿ ನೀಲಾಬಾಯಿ

**ದೋಷಾರೋಪಣೆ**

**ಶ್ರೀಮತಿ ಅಮ್ರಿನ್ ಸುಲ್ತಾನ, ಬಿ.ಎ., ಎಲ್.ಎಲ್.ಬಿ.,** 1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಕಡೂರು ಆದ ನಾನು ಈ ಕೆಳಗೆ ಕಾಣಿಸಿರುವಃ

ಶ್ರೀಮತಿ ನೀಲಾಬಾಯಿ, ಕೋಂ ಗಂಗಾನಾಯ್ಕ,
ಸುಮಾರು 36 ವರ್ಷಗಳು, ಮನೆಗೆಲಸ,
ವಾಸ : ಆಲಫಟ್ಟ ಗ್ರಾಮ, ಸಿಂಗಟಗೆರೆ ಹೋಬಳಿ,
ಕಡೂರು ತಾಲ್ಲೂಕು, ಚಿಕ್ಕಮಗಳೂರು.

**ಆದ ನಿಮ್ಮ ವಿರುದ್ಧ ಈ ಕೆಳಗಿನಂತೆ ಹೊರಿಸಿರುವ ದೋಷಾರೋಪಣೆ ಮಾಡುವುದೇನೆಂದರೆಃ**

ದಿನಾಂಕಃ 01.04.2023 ರಂದು ಮದ್ಯಾಹ್ನ 1-30 ರ ಸಮಯದಲ್ಲಿ ಸಿಂಗಟಗೆರೆ ಠಾಣಾ ವ್ಯಾಪ್ತಿಯ ಆಲಫಟ್ಟ ಗ್ರಾಮದಿಂದ ಸೇವಲಾಲ್ ದೇವಸ್ಥಾನಕ್ಕೆ ಹೋಗುವ ಸಿಮೆಂಟ್ ರಸ್ತೆಯ ಪಕ್ಕದ ಹೂವಿನ ಗಿಡದ ಹತ್ತಿರ ಆರೋಪಿಯು ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿದ್ದಾರೆ ಎಂದು ಚಾಸಾ-1 ಶ್ರೀಮತಿ ಚೈತ್ರರವರಿಗೆ ಬಂದ ಮಾಹಿತಿ ಮೇರೆಗೆ, ಇಲಾಖಾ ಸಿಬ್ಬಂದಿ ಹಾಗೂ ಪಂಚರೊಂದಿಗೆ ಕೃತ್ಯ ಸ್ಥಳಕ್ಕೆ ಭೇಟಿ ನೀಡಿದಾಗ, ಆರೋಪಿಯಾದ ನೀವು ಕಪ್ಪು ಬಣ್ಣದ ಪ್ಲಾಸ್ಟಿಕ್ ಹ್ಯಾಂಡ್ ಕವರಿನಲ್ಲಿ ಸುಮಾರು ರೂ.1,800/- ಮೌಲ್ಯದ 90 ಎಂ.ಎಲ್ ನ ಮದ್ಯ ತುಂಬಿದ 50 ರಾಜ ವಿಸ್ಕಿ ಮದ್ಯ ತುಂಬಿದ ಪೌಚುಗಳನ್ನು ಯಾವುದೇ ಪರವಾನಗಿ ಇಲ್ಲದೆ ಅಕ್ರಮವಾಗಿ ಸಾರ್ವಜನಿಕರಿಗೆ ಮಾರಾಟ ಮಾಡುವ ಉದ್ದೇಶದಿಂದ ದಾಸ್ತಾನು ಮಾಡಿಕೊಂಡು ಸಾಗಾಟ ಮಾಡುತ್ತಿದ್ದ ಕಾರಣ,

ಆರೋಪಿಯಾದ ನೀವು ಕರ್ನಾಟಕ ಅಬಕಾರಿ ಕಾಯ್ದೆ ಕಲಂ.32 ಮತ್ತು 34 ರ ರೀತ್ಯ ಶಿಕ್ಷಾರ್ಹ ಅಪರಾಧ ಎಸಗಿರುತ್ತೀರೆಂದು ದೂಷಿಸಲಾಗಿದೆ.

ನೀವು ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಸದರಿ ಅಪರಾಧವನ್ನು ಮಾಡಿರುವುದರಿಂದ ಈ ಮೇಲಿನ ದೋಷಾರೋಪಣೆಯನ್ನು ಈ ನ್ಯಾಯಾಲಯದಲ್ಲಿ ಎದುರಿಸಬೇಕೆಂದು ನಾನು ನಿರ್ದೇಶಿಸುತ್ತಿದ್ದೇನೆ.

1. ನಿಮಗೆ ಈಗ ಓದಿ ಹೇಳಿದ ಆರೋಪವು ತಿಳಿಯಿತೆ?

ಆರೋಪಿ ಉತ್ತರಃ ಹೌದು

2. ನಿಮ್ಮ ಮೇಲೆ ಇರುವ ಆರೋಪವನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆ ಆಗಬೇಕೆ?

ಆರೋಪಿ ಉತ್ತರಃ ಹೌದು

ಈ ಮೇಲಿನ ಆರೋಪಣೆಯನ್ನು ಆರೋಪಿಗೆ ತಿಳಿಯುವ ಭಾಷೆಯಲ್ಲಿ ಓದಿ ತಿಳಿಸಿ ಅವರು ನೀಡಿದ ಉತ್ತರವನ್ನು ಯಥಾ ಪ್ರಕಾರವಾಗಿ ದಾಖಲಿಸಿಕೊಂಡಿದ್ದೇನೆ.

ದಿನಾಂಕಃ 22 ನೇ ದಿವಸ ನವೆಂಬರ್ ಮಾಹೆ 2023 ನೇ ಇಸವಿ.

ಸಹಿ/-

(ಶ್ರೀಮತಿ ಅಫ್ರಿನ್ ಸುಲ್ತಾನ)
1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರದನ್ಯಾದಂ.ಗಳು, ಕಡೂರು.